ಆಟೊ ಸ್ಟ್ಯಾಂಡ್ ಕೆಲವು ನಿಮಿಷಗಳಲ್ಲಿಯೇ ಬಂತು. 'ನಡೆದುಕೊಂಡೇ ಬಂದಿರಬಹುದೇನೋ?' ಎಂದು ಅಂದುಕೊಳ್ಳುತ್ತಲೇ ಡ್ರೈವರ್ ಸೀಟಿನಿಂದ ಇಳಿದೆ.

"ಥ್ಯಾಂಕ್ ಯೂ ಫರ್ ದ ನೈಸ್ ಟೈಮ್."

"ನಾನೇ ಥ್ಯಾಂಕ್ಸ್ ಹೇಳಬೇಕು. ಇಟ್ಸ್ ಅ ಪರ್ಫೆಕ್ಟ್ ಈವನಿಂಗ, ಕಾಫೀ, ಡಿಸ್ಕಷನ್, ನಿಮ್ಮ ಟೈಮ್, ನೀವು... ಎಲ್ಲದ್ದಕ್ಕೂ..." ಎನ್ನುತ್ತಾ ಕೈನೀಡಿ ಕುಲುಕಿದೆ.

"ಥ್ಯಾಂಕ್ ಯೂ ಬೈ."

"ಬೈ, ಬೈ, ಕೀಪ್ ಸ್ಮೈಲಿಂಗ್."

ಕುಲುಕಿ ಮುಗಿದಿದ್ದರೂ ಕೈಯನ್ನು ಹಿಡಿದುಕೊಂಡೇ ನಿಂತಿದ್ದ. ಮೆಲ್ಲಗೆ ಕೈಯನ್ನು ಬಿಡಿಸಿಕೊಂಡೆ. ಅವನು ಇಷ್ಟವಿಲ್ಲದೆ ಕೈಯನ್ನು ಬಿಟ್ಟಂತೆ ತೋರಿತು.

ಮೌನ. ಏನೆಂದು ಅರಿಯಲಾಗದ ಒಂದು ಭಾವನೆ ಮನಸ್ಸನ್ನು ಮೆಲ್ಲಗೆ ಒದ್ದೆ ಮಾಡಿತು. ಇದಕ್ಕಿಂತ ಹೆಚ್ಚಾಗಿ ಇದ್ದರೆ ಇಬ್ಬರೂ ಏನನ್ನಾದರೂ ಒದರಲು ಶುರುಮಾಡಬಹುದು ಎಂದು ತಕ್ಷಣ ಸರಿಯಾಗಿ ಕೇಳದ ಒಂದು 'ಬೈ'ಯನ್ನು ಗೊಣಗಿ ಮೆಲ್ಲಗೆ ತಿರುಗಿ ನಡೆದು ಸ್ಟ್ಯಾಂಡಿನಲ್ಲಿದ್ದ ಮೊದಲ ಆಟೊದಲ್ಲಿ ಹತ್ತಿ ತಲೆ ತಗ್ಗಿಸಿ ಚಿಂತೆಯೊಂದಿಗೆ ಕುಳಿತ.

ಆಟೊ ಹೊರಡುವವರೆಗೆ ನೋಡುತ್ತಾ ನಿಂತಿದ್ದೆ. ಮಳೆ ಮೆಲ್ಲಗೆ ಹನಿಯಿತು.

ಹೊತ್ತನ್ನು, ರಸಿಕತೆಯನ್ನು, ಕಾಫಿಯನ್ನು ಹೊರತು ಬೇರೆ ಇನ್ನಾವುದನ್ನೂ ಹಂಚಿಕೊಳ್ಳದೆ, ಕವಿತೆಯಂತೆ ಮುಗಿದುಹೋದ ಈ ಭೇಟಿಯಲ್ಲಿ ಅವನ ಹೆಸರು ಏನಿರಬಹುದು ಎಂದು ಯೋಚಿಸುತ್ತಾ ಕಾರನ್ನು ಸ್ಟಾರ್ಟ್ ಮಾಡಿದೆ.


**ಅರುಣ ರಾಜ್**

ಲೇಖಕಿ ದಂತವೈದ್ಯೆ. ಚೆನ್ನೈನಲ್ಲಿರುವ ತಮಿಳುನಾಡು ಸರಕಾರಿ ಡೆಂಟಲ್ ಕಾಲೇಜಿನಲ್ಲಿ ಅಧ್ಯಾಪಕರು. ಅರುಣ ಅವರ ಮೊದಲ ಬರವಣಿಗೆ ಶುರುವಾಗಿದ್ದು ಫೇಸ್‌ಬುಕ್‌ನಲ್ಲಿ. ಅವರ 'ಸೆಕಂಡ್ ಷೋ' ಎಂಬ ಸಣ್ಣ ಕತೆಗೆ 'ದಿನಮಲರ್' ಪತ್ರಿಕೆಯ ಬಹುಮಾನ ಬಂದಿದೆ. ಅವರ ಕಥಾಸಂಗ್ರಹ 'ಕರುಪ್ಪಿ'.

**ಕೆ. ನಲ್ಲತಂಬಿ**

ಕನ್ನಡ ಹಾಗೂ ತಮಿಳು ಭಾಷೆಗಳ ನಡುವೆ ಪರಸ್ಪರ ಅನುವಾದ ಮಾಡುತ್ತ ಬಂದಿರುವ ನಲ್ಲತಂಬಿ ಮೈಸೂರಿನವರು. ಪ್ರಸ್ತುತ ಬೆಂಗಳೂರಿನಲ್ಲಿ ನೆಲಸಿದ್ದಾರೆ. ಪಿ. ಲಂಕೇಶ್‌ರ 'ನೀಲು' ಕವಿತೆಗಳನ್ನು 'ಮೊಟ್ಟುವಿರಿಯುಮ್ ಸತ್ತಮ್' ಎಂಬ ಹೆಸರಿನಲ್ಲಿ ತಮಿಳು ಭಾಷೆಗೆ ಅನುವಾದಿಸಿದ್ದಾರೆ.